MR. SPEAKER.—This matter pertains to the Legislature. The same has been examined. You please contact me and I will certainly discuss with you.

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಅಧ್ಯಕ್ಷರೇ ನಾನು ೨೦ ಪ್ರಶ್ನೆಗಳನ್ನು ಕಳುಹಿಸಿ ೨ ತಿಂಗಳಾಯಿತು. ಇದುವರೆಗೂ ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ ಕೆಲವರ ಪ್ರಶ್ನೆಗಳಿಗೆ ಉತ್ತರ ಎರಡು ದಿವಸಗಳಿಗೊಮ್ಮೆ ಬರುತ್ತಿದೆ. ಇದುವರೆಗೆ ನನ್ನ ಒಂದು ಪ್ರಶ್ನೆಗೂ ಉತ್ತರ ಬಂದಿಲ್ಲ.

ಅಧ್ಯಕ್ಷರು.—ಕಾಲ್ ಅಟೆನ್‌ಷನ್ ನೋಟೀಸ್ ಬಂದಿದೆ. ನಾನು ಅದನ್ನು ಚೆಕ್‌ಮಾಡುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.—ಬೀಜವನ್ನು ಸಪ್ಲೈ ಮಾಡುವ ಬಗ್ಗೆ ನಾನು ಒಂದು ಪಾರ್ಟ್‌ನೋಟೀಸ್ ಕ್ವೆಶ್ಚನ್ ಕೊಟ್ಟಿದ್ದೆ. ಈ ಗಾಗಲೇ ಬಿತ್ತಿದ ಬೀಜವೆಲ್ಲಾ ಮಳೆ ಇಲ್ಲದೆ ಒಣಗಿ ಹೋಗಿದೆ. ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ.

MR. SPEAKER.—Please contact me.

ಶ್ರೀ ಜೆ. ಎಚ್. ಪಟೇಲ್.—ಸ್ವಾಮಿ ಭೀಮಣ್ಣ ಖಂಡ್ರೆ ಎಂದು ಇರುವುದನ್ನು ಭೀಮಣ್ಣ ತರ್ಲೆ ಎಂದು ಮಾಡಿದರೆ ಒಳ್ಳೆಯದು.

re :—Admission to Students in Kolar Govt. College.

ಶ್ರೀ ಎಸ್. ಗೋವಿಂದಗೌಡ.—ಸ್ವಾಮಿ ಕೋಲಾರ ಸರ್ಕಾರಿ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಅಡ್ಮಿಷನ್ ಕೊಡುವ ಬಗ್ಗೆ ನಾನು ಒಂದು ನೋಟೀಸ್ ಕಳುಹಿಸಿದ್ದೆ. ಅದನ್ನು ತಾವು ಡಿಸ್‌ಅಲೋ ಮಾಡಿದ್ದೀರಿ. ಇದರ ಬಗ್ಗೆ ಮಾನ್ಯ ಮಂತ್ರಿಗಳಿಗೂ ಕೂಡ ಅರ್ಜಿಯನ್ನು ಕೊಟ್ಟಿದೆ. ಇವೊತ್ತು ಸುಮಾರು ೩೦೦ ಜನ ವಿದ್ಯಾರ್ಥಿಗಳು ನನ್ನ ಮನೆಯ ಮುಂದೆ ಧರಣಿ ಕುಳಿತುಕೊಂಡಿದ್ದಾರೆ ಆಗ್ಗದಿಂದ ಮಾನ್ಯ ವಿದ್ಯಾ ಮಂತ್ರಿಗಳು ಸಂಬಂಧಪಟ್ಟ ಕಾಲೇಜಿನ ಪ್ರಿನ್ಸಿಪಾಲರಿಗೆ ಸೂಚನೆ ಕೊಟ್ಟು ೩೦೦ ಜನ ವಿದ್ಯಾರ್ಥಿಗಳನ್ನು ಕಾಲೇಜಿಗೆ ಅಡ್ಮಿಟ್ ಮಾಡಿಕೊಳ್ಳುವುದಕ್ಕೆ ವಿಪ್ರಾಡು ಮಾಡಬೇಕು. ಒಂದು ತರಗತಿಗೆ ೮೦ ಹುಡುಗರಿಗಿಂತ ಹೆಚ್ಚು ವಿದ್ಯಾರ್ಥಿಗಳನ್ನು ಸೇರಿಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಮೆರಿಟ್ ಇರುವವರನ್ನು ಸೇರಿಸಿಕೊಳ್ಳಿ ಎಂದು ಸರ್ಕಾರದವರು ಡೈರೆಕ್ಷನ್ ಕೊಟ್ಟಿದ್ದಾರೆಂದು ನಾನು ಕೇಳಿದ್ದೇನೆ. ಆದರೆ ಹಳ್ಳಿಗಾಡುಗಳಲ್ಲಿ ೩೫ ಪರ್ಸೆಂಟ್ ಮೇಲೆ ಹುಡುಗರು ಮಾರ್ಕ್ ತೆಗೆದುಕೊಳ್ಳುವುದಿಲ್ಲ. ಪಿ.ಯು.ಸಿ. ಮೊದಲನೆಯ ವರ್ಷಕ್ಕೆ ೬೦ ಪರ್ಸೆಂಟ್ ಮಾರ್ಕ್ಸ್ ಬಂದಿರಬೇಕು ಎಂದು ಪ್ರಿನ್ಸಿಪಾಲರು ಹೇಳುತ್ತಾರೆ. ಹೀಗಿರುವಾಗ ಕೋಲಾರದ ಸರ್ಕಾರಿ ಕಾಲೇಜಿನಲ್ಲಿ ೩೦೦ ಜನ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವುದಕ್ಕೆ ಅವರಿಗೆ ಸೂಚನೆ ಕೊಡಬೇಕು. ೩೦೦ ಜನ ವಿದ್ಯಾರ್ಥಿಗಳು ಇವೊತ್ತು ನನ್ನ ಮನೆಯ ಮುಂದೆ ಧರಣಿ ಕುಳಿತುಕೊಂಡಿದ್ದಾರೆ.

ಶ್ರೀ ಯು. ಟಿ. ಫರೀದ್.—ಒಂದು ಸೆಕ್ಷನ್ನಿಗೆ ೮೦ ಮಂದಿ ವಿದ್ಯಾರ್ಥಿಗಳನ್ನು ಅಡ್ಮಿಟ್ ಮಾಡಿಕೊಳ್ಳಬೇಕೆಂದು ಸರ್ಕಾರದವರು ಸರ್ಕ್ಯುಲರ್ ಕಳುಹಿಸಿದ್ದರೂ ಕೂಡ ೬೦ ಮಂದಿಗೇ ನಿಲ್ಲಿಸಿದ್ದಾರೆ. ಹೆಚ್ಚು ಮಂದಿಯನ್ನು ತೆಗೆದುಕೊಳ್ಳುವುದಿಲ್ಲ ಎಂದು ಹೇಳುತ್ತಿದ್ದಾರೆ ನನ್ನ ಮಂಗಳೂರಿನಲ್ಲಿ ಕೂಡ ಈ ರೀತಿ ಆಗಿದೆ. ಇದರ ಬಗ್ಗೆ ಮಂತ್ರಿಗಳನ್ನು ನೋಡಲು ಎರಡು ಡೆಲಿಗೇಷನ್‌ಗಳು ಬಂದಿದ್ದವು. ಮಾನ್ಯ ಮಂತ್ರಿಗಳು ಅದನ್ನು ಸರಿಪಡಿಸುತ್ತೇನೆ ಎಂದು ಹೇಳಿದ್ದರು ಮಂತ್ರಿಗಳು ವಿದ್ಯಾರ್ಥಿಗಳಿಗೆ ಆಶ್ವಾಸನೆಯನ್ನು ಕೊಟ್ಟಿದ್ದರು. ಆ ಆಶ್ವಾಸನೆಯನ್ನು ಈ ಡೇರಿಸಿದ್ದಾರೆಯೋ ಇಲ್ಲವೋ ಗೊತ್ತಿಲ್ಲ. ನಮ್ಮಲ್ಲಿ ಏನಾಗಿದೆ ಎಂದರೆ ನಾವು ಜಾಸ್ತಿ ಅಡ್ಮಿಷನ್ ಕೇಳುತ್ತಾ ಇಲ್ಲ. ಇದ್ದದ್ದನ್ನು ಕಡಿಮೆ ಮಾಡಿದ್ದಾರೆ. ನಮ್ಮ ಜಿಲ್ಲೆಯ ಲ್ಲಿ ಕಾಲೇಜುಗಳಲ್ಲಿ ಈಗಾಗಲೇ ಅಡ್ಮಿಷನ್ ಕ್ಲೋಸ್ ಆಗಿದೆ ಎಂದು ಹೇಳುತ್ತಾರೆ. ಆದ್ದರಿಂದ ಈಗ ೮೦ ಜನ ವಿದ್ಯಾರ್ಥಿಗಳನ್ನು ಅಡ್ಮಿಟ್ ಮಾಡಿಕೊಳ್ಳಬಹುದು ಎಂದು ಒಂದು ಸರ್ಕ್ಯುಲರ್ ಅನ್ನು ಸರ್ಕಾರದವರು ಅಲ್ಲಿಗೆ ಕಳುಹಿಸಿದರೆ ಅವರು ವಿದ್ಯಾರ್ಥಿಗಳನ್ನು ಅಡ್ಮಿಟ್ ಮಾಡಿಕೊಳ್ಳುತ್ತಾರೆ. ಇಲ್ಲದಿದ್ದರೆ ಅಡ್ಮಿಟ್ ಮಾಡಿಕೊಳ್ಳುವುದಿಲ್ಲ. ಟೆಕ್ನಿಕಲ್ ಡಿಫಿಕಲ್ಟಿ ಇದೆ ಎಂದು ಹೇಳುತ್ತಾರೆ. ಆದ್ದರಿಂದ ಆ ಕಾಲೇಜಿನ ಪ್ರಿನ್ಸಿಪಾಲರಿಗೆ ಸರ್ಕ್ಯುಲರ್ ಹೋದರೆ ಅವರು ಅಡ್ಮಿಷನ್ ತೆಗೆದುಕೊಳ್ಳುತ್ತಾರೆ. ಇಲ್ಲದಿದ್ದರೆ ಆಗುವುದಿಲ್ಲ.

ಶ್ರೀ ಕೆ. ಎಚ್. ಹನುಮೇಗೌಡ.—ಹಾಸನದಲ್ಲಿರುವ ಫರ್ಸ್ಟ್‌ಗ್ರೇಡ್ ಕಾಲೇಜಿನಲ್ಲಿ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು ಎರಡೂ ಒಟ್ಟಿಗೆ ಇರುವುದರಿಂದ ಆ ಕಾಲೇಜಿನಲ್ಲಿ ೩ ಸಾವಿರಕ್ಕೆ ಮೇಲ್ಪಟ್ಟು ವಿದ್ಯಾರ್ಥಿಗಳು ಇದ್ದಾರೆ. ಆದ್ದರಿಂದ ಅವರನ್ನು ಕಂಟ್ರೋಲ್ ಮಾಡುವುದು ಬಹಳ ಕಷ್ಟವಾಗುತ್ತದೆ. ಆದ್ದರಿಂದ ಪ್ರಿನ್ಸಿಪಾಲರು ಹೆದರಿ ರಜಾ ಹಾಕಿದ್ದಾರೆ. ಈ ಕಾಲೇಜಿನಲ್ಲಿ ೧೬ ಜನ ಲೆಕ್ಚರರ್ಸ್ ಇಲ್ಲ. ಕಾಲೇಜಿನಲ್ಲಿ ಹುಡುಗರು ಗದ್ದಲ ಮಾಡುತ್ತಿದ್ದಾರೆ. ಆದ್ದರಿಂದ ಮಾನ್ಯ ವಿದ್ಯಾ ಮಂತ್ರಿಗಳು ಈ ಕಡೆ ತಮ್ಮ ಗಮನವನ್ನು ಹರಿಸಿ ಇದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕು. ಈಗ ಅಲ್ಲಿಗೆ ಬರತಕ್ಕ ವಿದ್ಯಾರ್ಥಿಗಳಿಗೆ ಅಡ್ಮಿಷನ್ನಿಗೆ ವ್ಯವಸ್ಥೆ ಮಾಡಬೇಕು. ಅಲ್ಲಿರತಕ್ಕ ಸೈನ್ಸ್ ಮತ್ತು ಆರ್ಟ್ಸ್ ಕಾಲೇಜು ಒಂದೇ ಕಾಲೇಜಿನಲ್ಲಿ ಏನಿವೆ ಅದನ್ನು ಬೈಫರ್‌ಕೇಟ್ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಗಂಗಹನುಮಯ್ಯ —ನಮ್ಮ ಕ್ಷೇತ್ರದಲ್ಲಿ ಕೂಡ ಇದೇ ತರಹ ವಾತಾವರಣ ಇದೆ. ನಾವು ಅಲ್ಲಿಗೆ ಹೋದರೆ ವಿದ್ಯಾರ್ಥಿಗಳು ನಮ್ಮನ್ನು ಘೇರಾವ್ ಮಾಡುತ್ತಾರೆ. ತುಮಕೂರಿನಲ್ಲಿ ಹರಿಜನ ವಿದ್ಯಾರ್ಥಿಗಳಿಗೆ ಅಡ್ಮಿಟ್ ಮಾಡಿಕೊಳ್ಳುವುದಕ್ಕೆ ಇಷ್ಟು ಪರ್ಸೆಂಟೇಜ್ ಮಾರ್ಕ್ಸ್ ಬಂದಿರಬೇಕು ಎಂದು ಹೇಳುತ್ತಾರೆ. ಇದರಿಂದ ಹರಿಜನ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಮಾಡುವುದಕ್ಕೆ ಸಾಧ್ಯವಿಲ್ಲವಾಗಿದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಸಂಬಂಧಪಟ್ಟವರಿಗೆ ಸೂಚನೆ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜಿ. ಬಿ. ಶಂಕರರಾವ್ (ವಿದ್ಯಾ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈಗ ಇರುವ ಪರಿಸ್ಥಿತಿ ಬಗ್ಗೆ ವಿದ್ಯಾರ್ಥಿಗಳ ಮುಖಂಡರೂ ಮತ್ತು ವಿಧಾನ ಸಭಾ ಸದಸ್ಯರೂ ಈಗಾಗಲೇ ಹೇಳಿದ್ದಾರೆ ಈ ವಿಚಾರದಲ್ಲಿ ಡೈರೆಕ್ಟರ್ ಅವರನ್ನು ಕರೆಸಿ ಮಾತನಾಡಿದ್ದೇನೆ. ಪ್ರತಿಯೊಂದು ವಿಭಾಗದಲ್ಲೂ ನಿಗದಿಗಿಂತ ಜಾಸ್ತಿ ಸಂಖ್ಯೆ ಇದ್ದರೆ ಅದನ್ನು ಹೆಚ್ಚಿಸವುದರ ಬಗ್ಗೆ ಯೂನಿವರ್ಸಿಟಿಯವರ ಒಪ್ಪಿಗೆ ಪಡೆಯಬೇಕಾಗುತ್ತದೆ ಅವರ ಹೇಳಿಕೆ ಪ್ರಕಾರ ಮಾಡಬೇಕಾಗುತ್ತದೆ. ಸೈನ್ಸ್ ವಿಭಾಗದಲ್ಲಾದರೆ ೬೦ಕ್ಕಿಂತ ಹೆಚ್ಚು ಸಂಖ್ಯೆಯನ್ನಾದರೂ ಸರಿ ಸೇರಿಸಿಕೊಳ್ಳಬಹುದು ಎಂದು ಈಗಾಗಲೇ ಯೂನಿವರ್ಸಿಟಿಯವರಿಂದ ಒಪ್ಪಿಗೆ ಪಡೆದಿದ್ದೇವೆ. ಅದರಂತೆ ಆದೇಶ ಈಗಾಗಲೇ ಹೋಗಿದೆ. ಪ್ರವೇಶದ ಬಗ್ಗೆ ಹೇಳಬೇಕಾದರೆ ಯಾರು ಮುಂಚೆ ಮುಂಚೆ ಹೋಗಿದ್ದಾರೋ ಅವರಿಗೆ ಪ್ರವೇಶ ಸಿಕ್ಕಿದೆ. ಯಾರು ಈಗ ಪ್ರವೇಶಕ್ಕಾಗಿ ಕಾಯುತ್ತಾ ಇದ್ದಾರೋ ಆ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಮುಂದೆ ಏನು ಮಾಡಬೇಕೋ ಅದನ್ನು ಮಾಡುತ್ತೇನೆ. ಯಾವ ಯಾವ ಕಾಲೇಜಿನಲ್ಲಿ ಏನೇನು ಪರಿಸ್ಥಿತಿ ಇದೆ ಅನ್ನುವುದನ್ನು ತಿಳಿದುಕೊಂಡು ಮತ್ತೆ ತಮಗೆ ತಿಳಿಸುತ್ತೇನೆ. ಮಾನ್ಯ ಕೆ. ಹೆಚ್. ಹನುಮೇಗೌಡರು ಹಾಸನದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ೩ ಸಾವಿರಕ್ಕಿಂತ ಜಾಸ್ತಿ ಇದೆ. ಅದನ್ನು ವಿಂಗಡಿಸಬೇಕು ಎಂದು ಹೇಳಿದ್ದಾರೆ. ಆ ಬಗ್ಗೆ ಆದೇಶ ಕೊಟ್ಟಿದ್ದೇನೆ. ಕಾಲೇಜಿನಲ್ಲಿ ೧೦೦ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಾದರೆ ಪ್ರವೇಶ ಕೊಡುವುದಕ್ಕಾಗುವುದಿಲ್ಲ. ಹೊಸದಾಗಿ ಕಾಲೇಜನ್ನು ಮಾಡಬೇಕಾಗುತ್ತದೆ. ಈ ವಿಚಾರ ಪರಿಶೀಲನೆಯಲ್ಲಿದೆ.

ಶ್ರೀ ಮಳ್ಳೂರು ಆನಂದರಾವ್.—ಮಾನ್ಯ ವಿದ್ಯಾ ಮಂತ್ರಿಗಳು ಒಂದು ಮುಖ ತೋರಿಸಿದರು. ಇದಕ್ಕೆ ಸಂಬಂಧಪಟ್ಟ ಹಾಗೆ ಇನ್ನೊಂದು ಮುಖವನ್ನೂ ತೋರಿಸುವುದಕ್ಕೆ ಹೇಳುತ್ತೇನೆ ಈಗ ಪ್ರೈವೇಟ್ ಕಾಲೇಜುಗಳಲ್ಲಿ ಸೇರಬೇಕಾದರೆ ಅಡ್ಮಿಷನ್ ಫೀಸ್ ಕೊಡಬೇಕಾಗುತ್ತದೆ ಇಲ್ಲದೇ ಹೋದರೆ ಅಪ್ಲಿಕೇಷನ್ ರಿಜೆಕ್ಟ್ ಮಾಡಿಬಿಡುತ್ತಾರೆ. ಸರ್ಕಾರೀ ಕಾಲೇಜಿಗೆ ವಿದ್ಯಾರ್ಥಿಗಳು ಸೇರಬೇಕಾದರೆ ಅವರನ್ನು ಸೇರಿಸಿಕೊಳ್ಳಲೇ ಬೇಕಾಗುತ್ತದೆ. ಇಲ್ಲ ಎಂದು ಹೇಳುವ ಅಧಿಕಾರವೇ ಇಲ್ಲ. ಅವನಿಗೆ ಎಸ್, ಎಸ್. ಎಲ್. ಸಿ. ಪಾಸಾಗಿದ್ದರೂ ಕೂಡ He has got a right to get himself admitted to that college. You have no right to say no, to that student. ಹೀಗಿದ್ದರೂ ಸಹ ಸರ್ಕಾರೀ ಕಾಲೇಜಿನಲ್ಲಿ ೬೦ ಪರ್ಸೆಂಟ್ ಮೇಲೆ ಇದ್ದರೆ ಸೀಟು ಕೊಡುತ್ತಾರೆ ಇಲ್ಲದೇ ಹೋದರೆ ಅಡ್ಮಿಷನ್ ಕೊಡುವುದಿಲ್ಲ. ಅಪ್ಲಿಕೇಷನ್ ರಿಜೆಕ್ಟ್ ಮಾಡಿಬಿಡುತ್ತಾರೆ. ಈ ರೀತಿ ತೊಂದರೆ ಇರುವುದರಿಂದ ತಾವು ಎಲ್ಲಾ ಕಾಲೇಜುಗಳಿಗೂ ಆದೇಶ ಕೊಡಬೇಕು. ಯಾವ ಯಾವ ವಿದ್ಯಾರ್ಥಿಗಳು ಹಿಂದಿನ ತರಗತಿಯಲ್ಲಿ ಪಾಸಾಗಿ ಅರ್ಹತೆ ಪಡೆದು ಬಂದಿದ್ದಾರೆ ಅಂಥಾ ವಿದ್ಯಾರ್ಥಿಗೆ ಸರ್ಕಾರೀ ಕಾಲೇಜುಗಳಲ್ಲಿ ಪ್ರವೇಶ ಸಿಗುವ ಹಾಗೆ ಅವಕಾಶ ಮಾಡಿಕೊಡಬೇಕು. ಒಂದುವೇಳೆ ಹಾಗೆ ಆಗದೇ ಹೋದರೆ ಒಂದು ಹೊಸ ಸೆಕ್ಷನ್ ತೆರೆಯುವುದಕ್ಕಾದರೂ ಆದೇಶ ಕೊಡಬೇಕು ಎಂದು ಹೇಳುತ್ತೇನೆ. That is the crux of the problem.

ಶ್ರೀ ಜಿ. ಬಿ. ಶಂಕರ್‌ರಾವ್.—ಹೊಸ ಸೆಕ್ಷನ್ ತೆರೆಯಬೇಕಾದರೆ ಅದಕ್ಕೆ ಆಕಾಮಡೇಷನ್ ಬೇಕಾಗುತ್ತದೆ. ಇನ್ನೂ ಬೇರೆ ಬೇರೆಯಾದ ವ್ಯವಸ್ಥೆ ಮಾಡಬೇಕಾಗುತ್ತದೆ. ಹಾಗೆ ಮಾಡದೆ ಹೋದರೆ ಷಿಫ್ಟ್ ಅರೇಂಜ್‌ಮೆಂಟ್ಸ್ ಮಾಡಬೇಕಾಗುತ್ತದೆ. ಇವೆಲ್ಲವನ್ನೂ ಆಲೋಚನೆ ಮಾಡಿ ಮಾಡಬೇಕಾಗುತ್ತದೆ.

ಶ್ರೀ ವೈ ಕೇಲ್ ಫರ್ನಾಂಡಿಸ್.—ನಾನು ಕೋಡಹಳ್ಳಿ ಶಿವರಾಂ ಚಲನ ಚಿತ್ರ ನಿರ್ಮಾಪಕರು ತೆಗೆದಿರುವ ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸ್ ಕಳುಹಿಸಿದ್ದೇನೆ. ಇನ್ನೂ ಬಂದಿಲ್ಲಾ.

MR. SPEAKER.—I will take it up.

PAPERS TO BE LAID ON THE TABLE

SRI R. GUNDU RAO (Chief Minister).—Sir, I beg to lay the following Notifications standing again t my name.

1. Order No. HD 113 CNA 78, dated 9th July, 1980.
   Grant of exemption under Section 20 of the Karnataka Cinemas (Regulation) Act, 1964 for exhibition of 35 Mm. films by the Assistant Director of Central Institute of Indian Languages, Mysore.
2. Order No. HD 104 CNA 80 dated 11th July, 1980.
   Grant of exemption under Section 20 of the Karnataka Cinemas (Regulation) Act, 1964 for exhibition of 35 Mm. feature films by the DAR Welfare Centre, Mysore.
3. Order No. HD 239 CNA 78, dated 16th July, 1980.
   Grant of Exemption under Section 20 of the Karnataka Cinemas (Regulation) Act, 1964 for exhibition of 16 Mm. films by means of Photophone sound projectors by the National Mineral Development Corporation Limited, Donimali town ship, Bellary District.

Under section 20 of the Karnataka Cinema (Regulation) Act, 1964.

SPEAKER.—Papers are laid.

CALLING ATTENTION TO MATTERS OF URGENT PUBLIC IMPORTANCE :

re :—Non-release of Kannada film 'Grahana' in the State.

SRI D. T. RAMU.—I call the attention of the Chief Minister to the Non-release of Kannada Film 'Grahana' in the State which has won National, International Awards and has been screened in other States.

SRI R. GUNDU RAO (Chief Minister).—Sir. I beg to make the following statement.